ಶ್ರೀ ಎಸ್.ಎಸ್. ಪಾಟೀಲ್ : ಅದರ ಪ್ರಶ್ನೆ ಮಾರ್ಕೆಟಿಂಗ್ ಇಲಾಖೆಗೆ ಬರುವುದಿಲ್ಲ. ತಪ್ಪಾಗಿ ನಮಗೆ ಬಂದಿತ್ತು. ಕೂಡಲೇ ಆಹಾರ ಇಲಾಖೆಗೆ ಕಳುಹಿಸಿದ್ದೇವೆ.

ಅಧ್ಯಕ್ಷರು : ಆಹಾರ ಇಲಾಖೆಯ ಮಂತ್ರಿಗಳ ಪ್ರಶ್ನೆಗಳಿದ್ದಾಗ, ನಿಮ್ಮ ಪ್ರಶ್ನೆಗೂ ಉತ್ತರ ತರಿಸಿಕೊಡುತ್ತೇನೆ. ಇಲ್ಲಿಗೆ ಪ್ರಶ್ನೋತ್ತರ ಮುಗಿಯಿತು, ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ದಿನದ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ 25ನೇ ಪಟ್ಟಿಯಲ್ಲಿನ ಒಟ್ಟು 91 ಪ್ರಶ್ನೆಗಳ ಪೈಕಿ 35 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಇಡುತ್ತಿದ್ದೇನೆ.

ಸೋಮವಾರಪೇಟೆ ತಾಲ್ಲೂಕಿನ ಚೌಡು ಗ್ರಾಮಕ್ಕೆ ಸೇರಿದ ಜಮೀನಿನ ಸ್ವಾಧೀನ

1641 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸೋಮವಾರಪೇಟೆ ತಾಲ್ಲೂಕಿನ ಚೌಡು ಗ್ರಾಮಕ್ಕೆ ಸೇರಿದ ಜಮೀನು 7.82 ಎಕರೆ ವಿಸ್ತೀರ್ಣವನ್ನು ಸರ್ಕಾರ ಸ್ವಾಧೀನಪಡಿಸಿಕೊಂಡು ಸುಮಾರು ರೂ. 27,840.20 ಪೈಸೆಯನ್ನು 17.7.1989ರಲ್ಲಿ ಕೃಷಿ ಉತ್ಪಾದನೆ ವತಿಯಿಂದ ಪಾವತಿ ಮಾಡಿದ್ದರೂ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿರುವುದಿಲ್ಲವಲ್ಲದೆ ಪಡೆಕೊಂಡು ಜಮೀನು ಬಡವರ ಜಮೀನಾಗಿದ್ದು ಪರಿಹಾರ ಕೊಟ್ಟಂತಹ ಹಣ ಬಹಳ ಕಡಿಮೆಯಾಗಿದ್ದು ಸರ್ಕಾರ ಹೆಚ್ಚು ಹಣ ಕೊಡುವ ಉದ್ದೇಶವಿದೆಯೇ?*

ಆ) *ಈ ಜಮೀನಿನ ಮಾಲೀಕರು ಸರ್ಕಾರದ ಮೇಲೆ ಹಾಕಿದ ಮೊಕದ್ದಮೆ ಕೋರ್ಟಿನಲ್ಲಿ ಇತ್ಯರ್ಥ ಆಗಿದೆಯೇ? ವಿವರಗಳನ್ನು ಕೊಡಿ?*

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ರೂ.1,27,840.20 ಗಳನ್ನು ಭೂ ಪರಿಹಾರ ಮೊತ್ತವನ್ನು ಈಗಾಗಲೇ ತುಂಬಲಾಗಿದೆ. ಭೂಮಾಲೀಕರು ಹೆಚ್ಚಿನ ಪರಿಹಾರ ಕೋರಿ ಮಡಿಕೇರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದಾರೆ. ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇದೆ. ನ್ಯಾಯಾಲಯ ನೀಡುವ ತೀರ್ಪನ್ನು ಗಮನಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಆ) ಇಲ್ಲ. ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇದೆ.